ಶ್ರೀ ಬಸವನಗೌಡ ಪಾಟೀಲ್.—ಸ್ವಾಮಿ ಸುಮಾರು ೧೬೫ ಜನ ವಿದ್ಯಾರ್ಥಿಗಳು ಸುಳ್ಳು ಸರ್ಟಿಫಿಕೆಟ್ಸ್‌ಗಳನ್ನು ಕೊಟ್ಟು ಆ ಆಧಾರದ ಮೇಲೆ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳನ್ನು ಸೇರಿದ್ದಾರೆ ಅವರು ಸಾಮಾನ್ಯವಾಗಿ ಪಟ್ಟಣಗಳಲ್ಲಿ ವಾಸ ಮಾಡುವಂಥ ಅಧಿಕಾರಿಗಳ ಮತ್ತು ದೊಡ್ಡ ದೊಡ್ಡ ಶ್ರೀಮಂತರ ಮಕ್ಕಳು. ಆದರೆ ಈ ರೀತಿ ಮಾಡುವುದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ತೊಂದರೆಯಾಗುವುದಿಲ್ಲವೇ ಆದ್ದರಿಂದ ನಾನು ಕೇಳುವುದೇನೆಂದರೆ ಇದರಲ್ಲಿ ಪಟ್ಟಣಗಳಿಂದ ಬಂದಿರತಕ್ಕಂಥ ಮಕ್ಕಳು ಎಷ್ಟು ಜನ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ರಾಚಯ್ಯ.—ಆ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ.

ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಪಶುವೈದ್ಯ ಶಾಲೆಗಳ ಮಂಜೂರಾತಿ

೧೧೨ (೨೫೬) ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ (ಸಾಗರ).—ಮಾನ್ಯ ಪಶುಸಂಗೋಪನಾ ಪಶುವೈದ್ಯ ಸೇವೆಗಳು ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕಳೆದ ಐದು ವರ್ಷಗಳಿಂದ ರಾಜ್ಯದಲ್ಲಿ ಮಂಜೂರಾದ ಗ್ರಾಮೀಣ ಪಶುಚಿಕಿತ್ಸಾಲಯಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ)

ಆ) ಹಿಂದಿನ ಸರಕಾರ ಮಂಜೂರು ಮಾಡಿದ್ದ ಗ್ರಾಮಾಂತರ ಪಶುಚಿಕಿತ್ಸಾಲಯಗಳನ್ನು ಈ ಸರಕಾರ ಪ್ರಾರಂಭಿಸದೆ ತಡೆ ಹಿಡಿಯಲಾಗಿದೆಯೆ ?

ಇ) ಯಾವ ಉದ್ದೇಶದಿಂದ ಹಾಗೆ ತಡೆ ಹಿಡಿಯಲಾಗಿದೆ ಮತ್ತು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು) (ಪಶುಸಂಗೋಪನಾ, ಪಶುವೈದ್ಯ ಸೇವೆಗಳ ಹಾಗೂ ತೋಟಗಾರಿಕೆ ಮಂತ್ರಿಗಳ ಪರವಾಗಿ).—

ಅ) ಹೌದು, ಜಿಲ್ಲಾವಾರು ವಿವರಗಳನ್ನು ಆ ಪಟ್ಟಿಯಲ್ಲಿ ಕೊಡಲಾಗಿದೆ.

ಆ) ಇಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ. ತಾಂತ್ರಿಕ ಸಿಬ್ಬಂದಿ ದೊರೆತ ಕೂಡಲೇ ಪ್ರಾರಂಭಿಸಲಾಗುವುದು.

ಪಟ್ಟಿ 'ಅ'

ಸಂ.	ಜಿಲ್ಲೆಗಳ ಹೆಸರು	ವರ್ಷ				
		೧೯೭೯-೮೨	೧೯೮೨-೮೦	೧೯೮೦-೮೧	೧೯೮೧-೮೨	೧೯೮೨-೮೩
೧	೨	೩	೪	೫	೬	೭
೧.	ಬೆಂಗಳೂರು	—	೧೬	—	೧	೨೨
೨.	ಕೋಲಾರ	—	೧೨	—	—	೧೧
೩.	ಶಿವಮೊಗ್ಗ	—	೧೦	—	—	೧೧
೪.	ತುಮಕೂರು	—	೬	—	—	೧೨
೫.	ಚಿತ್ರದುರ್ಗ	—	೧೦	—	—	೧೨
೬.	ಮೈಸೂರು	—	೧೦	—	—	೧೦
೭.	ಮಂಡ್ಯ	—	೬	—	—	೧೩

೧	೨	೩	೪	೫	೬	೭
೮.	ಚಿಕ್ಕಮಗಳೂರು	—	೫	—	೧	೯
೯.	ದಕ್ಷಿಣ ಕನ್ನಡ	—	೮	—	—	೧೦
೧೦.	ಕೊಡಗು	—	೩	—	—	೪
೧೧.	ಹಾಸನ	—	೧೦	—	—	೧೩
೧೨.	ಬೆಳಗಾಂ	—	೭	—	—	೧೨
೧೩.	ಧಾರವಾಡ	—	೯	—	—	೧೬
೧೪.	ಬಿಜಾಪುರ	—	೧೦	—	—	೮
೧೫.	ಉತ್ತರ ಕನ್ನಡ	—	೩	—	—	೫
೧೬.	ಗುಲ್ಬರ್ಗ	—	೮	೧	—	೧೨
೧೭.	ರಾಯಚೂರು	—	೭	—	—	೧೦
೧೮.	ಬಿದರ್	—	೫	—	—	೯
೧೯.	ಬಳ್ಳಾರಿ	—	೫	—	—	೬
	ಮೊತ್ತ	—	೧೫೦	೧	೨	೨೦೪

ವಿವರಣೆ: ೧೯೭೮–೭೯

೧೯೭೯–೮೦	೧೫೦
೧೯೮೦–೮೧	೧
೧೯೮೧–೮೨	೨
೧೯೮೨–೮೩	೨೦೪
	೩೫೭

ಶ್ರೀ ಎಲ್.ಟಿ. ತಿಮ್ಮಪ್ಪಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಳಿಸಿರುವಂತೆ ೩೫೭ ಜಿಲ್ಲಾವಾರು ಪಶುಚಿಕಿತ್ಸಾಲಯಗಳನ್ನು ಪ್ರಾರಂಭ ಮಾಡುವುದಕ್ಕೆ ಇದುವರೆಗೂ ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ ? ಈ ೩೫೭ ಪಶುಚಿಕಿತ್ಸಾಲಯಗಳನ್ನು ಇನ್ನು ಎಷ್ಟು ವರ್ಷಗಳಲ್ಲಿ ಪ್ರಾರಂಭ ಮಾಡುತ್ತೀರಿ ? ಅಥವಾ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರ ಹೇಳಬೇಕು.

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಪಶುಸಂಗೋಪನಾ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ ಈ ಪಶುಚಿಕಿತ್ಸಾಲಯಗಳ ತೊಂದರೆ ಇದ್ದುದರಿಂದ ೧೯೭೯–೮೦ನೇ ಸಾಲಿನಲ್ಲಿ ಸುಮಾರು ೧೫೦ ಗ್ರಾಮೀಣ ಪಶುಚಿಕಿತ್ಸಾಲಯಗಳನ್ನು ತೆರೆಯಬೇಕೆಂದು ಹೇಳಿ ಮಂಜೂರಾತಿಯನ್ನು ಕೊಟ್ಟರು. ಆದರೆ ಹಣಕಾಸಿನ ತೊಂದರೆಯಿಂದ ಅವುಗಳನ್ನು ಪ್ರಾರಂಭ ಮಾಡಲಿಲ್ಲ. ಆದರೆ ಜೊತೆಗೆ ೧೯೮೦–೮೧ ಮತ್ತೆ ೧೯೮೧–೮೨ರಲ್ಲಿ ಪುನರ್ ಪರಿಶೀಲನೆ ಮಾಡಿ ೨೦೪ ಪಶುಚಿಕಿತ್ಸಾಲಯಗಳನ್ನು ತೆರೆಯಲು ಮಂಜೂರಾತಿಯನ್ನು ಕೊಟ್ಟರು. ಆದರೆ ಈ ಪಶುಚಿಕಿತ್ಸಾಲಯಗಳಿಗೆ ಸಾಕಷ್ಟು ಮಂದಿ ಸಿಬ್ಬಂದಿ ಇಲ್ಲದ ಕಾರಣ ಅವುಗಳನ್ನು ತೆರೆಯಲು ಆಗಲಿಲ್ಲ. ಆದ್ದರಿಂದ ಈಗ ಸರ್ಕಾರ ಸುಮಾರು ೨೪ ತರಬೇತಿ ಕೇಂದ್ರಗಳನ್ನು ತೆರೆದಿದ್ದು ಆ ತರಬೇತಿ ಕೇಂದ್ರದಿಂದ ವಿದ್ಯಾರ್ಥಿಗಳು ತರಬೇತಿ ಪಡೆದು ಬಂದ ತಕ್ಷಣ ನಾವು ಈ ಪಶುಚಿಕಿತ್ಸಾಲಯಗಳನ್ನು ತೆರೆಯುವುದಕ್ಕೆ ವಿಪ್ರಾಡು ಮಾಡ ತ್ತೇವೆ.

ಶ್ರೀ ಎಲ್. ಟಿ. ತಿಪ್ಪಣ್ಣಪ್ಪಹೆಗಡೆ.—ಮಾನ್ಯ ಅಧ್ಯಕ್ಷರೇ ಈಗ ಸರ್ಕಾರದವರು ಮಂಜೂರಾತಿ ಕೊಟ್ಟಿರುವ ೨೦ಳಿ ಪಶುಚಿಕಿತ್ಸಾಲಯಗಳನ್ನು ವಾಪಸ್ಸು ತೆಗೆದುಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸಿಬ್ಬಂದಿ ಇಲ್ಲದ ಕಾರಣ ತೆರೆಯಲು ಆಗಲಿಲ್ಲವೆಂದು ಹೇಳಿದರು. ಆದರೆ ಸಿಬ್ಬಂದಿ ಬಂದ ತಕ್ಷಣ ತೆರೆಯಲಾಗುತ್ತದೆಂದು ಕೂಡ ತಿಳಿಸಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್.—ಸ್ವಾಮಿ, ನಾನು ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಾದರೆ ಹಿಂದೆ ಈ ಪಶುಚಿಕಿತ್ಸಾಲಯಗಳನ್ನು ಮಂಜೂರು ಮಾಡುವಾಗ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಳ್ಳದೆ ಮಂಜೂರಾತಿ ಮಾಡಿದ್ದಾರೆ. ಎರಡನೆಯದು ಇಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲ. ಈ ಸಿಬ್ಬಂದಿಯನ್ನು ತಯಾರು ಮಾಡುವುದಕ್ಕಾಗಿ ಸರ್ಕಾರ ಈಗ ೨ಳಿ ತರಬೇತಿ ಕೇಂದ್ರಗಳನ್ನು ತೆರೆದಿದೆ. ಅವರು ಅಲ್ಲಿಂದ ತರಬೇತಿ ಪಡೆದು ಬಂದ ತಕ್ಷಣ ಪ್ರಾರಂಭ ಮಾಡುತ್ತೇವೆ.

ಶ್ರೀ ಎಲ್. ಟಿ. ತಿಪ್ಪಣ್ಣಪ್ಪಹೆಗಡೆ.—ಸ್ವಾಮಿ ನಾನು ಕೇಳಿದ್ದು ಏನೆಂದರೆ ೧೯೭೯-೮೦ನೇ ಸಾಲಿನಲ್ಲಿ ೧೫೦ ಪಶುಚಿಕಿತ್ಸಾಲಯಗಳನ್ನು ಸರ್ಕಾರ ಮಂಜೂರು ಮಾಡಿದ್ದು, ಆ ನಂತರ ೧೯೮೨ನೇ ಇಸವಿಯಲ್ಲಿ ೩೦ಳಿ ಪಶುಚಿಕಿತ್ಸಾಲಯಗಳು ಮಂಜೂರು ಮಾಡಿದ್ದು, ಸರಿಯಾಗಿದೆ. ಆದರೆ ಈಗ ನಾನು ಕೇಳುವುದೇನೆಂದರೆ ಮಂಜೂರಾಗಿರುವ ಪಶುಚಿಕಿತ್ಸಾಲಯಗಳನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭ ಮಾಡುತ್ತೀರಿ? ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಇಲ್ಲವೇ ಹಂತ ಹಂತವಾಗಿ ಏನಾದರೂ ಪ್ರಾರಂಭ ಮಾಡುತ್ತೀರೋ?

ಶ್ರೀ ಎಂ.ಪಿ. ಪ್ರಕಾಶ್.—ಸ್ವಾಮಿ ಈಗ ಸಧ್ಯದ ಪರಿಸ್ಥಿತಿಯಲ್ಲಿ ಸಿಬ್ಬಂದಿಯ ಕೊರತೆ ಇದೆ. ಸಿಬ್ಬಂದಿ ಇಲ್ಲದೆ ಪಶುಚಿಕಿತ್ಸಾಲಯಗಳನ್ನು ತೆರೆದು ಏನು ಪ್ರಯೋಜನ? ನಾವು ಸಿಬ್ಬಂದಿಯನ್ನು ರಾತ್ರೋರಾತ್ರಿ ತಯಾರು ಮಾಡುವುದಕ್ಕೆ ಆಗುವುದಿಲ್ಲ. ನಾವು ಈಗ ಸುಮಾರು ೨ಳಿ ತರಬೇತಿ ಕೇಂದ್ರಗಳನ್ನು ತೆಗೆದಿದ್ದೇವೆ. ಅಲ್ಲಿಂದ ವಿದ್ಯಾರ್ಥಿಗಳು ಬಂದ ತಕ್ಷಣ ನಾವು ಪಶುಚಿಕಿತ್ಸಾಲಯಗಳನ್ನು ತೆರೆಯುತ್ತೇವೆ. ಮತ್ತೆ ಈಗ ಮಂಜೂರಾಗಿರುವ ೨೦ಳಿ ಪಶುಚಿಕಿತ್ಸಾಲಯಗಳನ್ನು ವಾಪಸ್ಸು ತೆಗೆದುಕೊಂಡಿಲ್ಲ.

ಶ್ರೀ ಎಸ್. ನಾರಾಯಣರಾವ್.—ಮಾನ್ಯ ಅಧ್ಯಕ್ಷರೇ ಪಶುಚಿಕಿತ್ಸಾಲಯಗಳಲ್ಲಿ ನಿವೃತ್ತರಾದ ಡಾಕ್ಟರ್ಸ್‌ಗಳನ್ನು ಮತ್ತು ಕಾಂಪೌಂಡರ್ಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಏನಾದರೂ ಯೋಚನೆ ಮಾಡಿದ್ದಾರೆಯೇ?

ಶ್ರೀ ಎಂ.ಪಿ. ಪ್ರಕಾಶ್.—ಈ ಬಗ್ಗೆ ಸರ್ಕಾರ ಪರಿಶೀಲನೆ ಮಾಡಲಾಗುತ್ತಿದೆ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಅಧ್ಯಕ್ಷರೇ ಈ ಕಾಂಪೌಂಡರ್ಸ್ ಮತ್ತು ಲೈವ್ ಸ್ಟಾಕ್ ಇನ್ಸ್‌ಪೆಕ್ಟರ್ಸ್‌ಗಳನ್ನು ತಾವು ಎಷ್ಟು ದಿನಸಗಳಲ್ಲಿ ತರಬೇತಿ ಕೊಟ್ಟು ಪ್ರಾರಂಭ ಮಾಡುತ್ತೀರಿ?

ಅಧ್ಯಕ್ಷರು.—ತರಬೇತಿ ಯಾವಾಗ ಮುಗಿಯುತ್ತದೆಯೋ ಅವಾಗ. ಇಷ್ಟೇ ದಿವಸವೆಂದು ಹೇಳುವುದಕ್ಕೆ ಹೇಗೆ ಸಾಧ್ಯವಾಗುತ್ತದೆ?

ಶ್ರೀ ಎಂ.ಪಿ. ಪ್ರಕಾಶ್.—ಒಂದು ವರ್ಷ ನಾವು ಅವರಿಗೆ ತರಬೇತಿಯನ್ನು ಕೊಡಲಾಗುತ್ತದೆ.

ಶ್ರೀ ಬಿ. ಬಸವನಗೌಡ ಪಾಟೀಲ್.—ಸ್ವಾಮಿ ಹಿಂದಿನ ಸರ್ಕಾರದವರು ೨೦ಳಿ ಪಶುಚಿಕಿತ್ಸಾಲಯಗಳನ್ನು ಮಂಜೂರು ಮಾಡಿದ್ದು ರಾಜಕೀಯ ಉದ್ದೇಶಕ್ಕಾಗಿ. ಅದೂ ಚುನಾವಣೆ ಡಿಕ್ಲೇರ್ ಆದ ಮೇಲೆ ಅಂದರೆ ಕಡೆಯ ಮಂತ್ರಿಮಂಡಲದ ಸಭೆಯಲ್ಲಿ ಈ ರೀತಿ ಮಾಡಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಈ ಪಶುಚಿಕಿತ್ಸಾಲಯಗಳನ್ನು ಸಿಬ್ಬಂದಿ ಇಲ್ಲದ ಕಾರಣ ತೆರೆಯಲಾಗಲಿಲ್ಲ. ಆದರೆ ಈ ೨೦ಳಿ ಪಶುಚಿಕಿತ್ಸಾಲಯಗಳನ್ನು ಮಂಜೂರು ಮಾಡಿದ್ದು ರಾಜಕೀಯ ಉದ್ದೇಶಕ್ಕೆ ಅಥವಾ ಅಲ್ಲವೇ ಎಂಬುದನ್ನು ನಾನು ಈ ಸದನದ ಅಭಿಪ್ರಾಯಕ್ಕೆ ಬಿಡುತ್ತೇನೆ.